(d) Notification No. RD 55 TRM 77, dated 1st May, 1980.

Remission of land revenue in respect of 62 villages of Koppal Taluk, Raichur District for the year 1963-64.

(e) Notification No. RD 14 TRM 80, dated 24th April, 1980.

Remission of land revenue in respect of 13 villages of Sorab, Shimoga District for the year 1978-79,

under section 194 (2) of the Karnataka Land Revenue Act, 1964.

SRI M. M. J. SADYOJATHA (Minister for Transport and Minor Irrigation).—Sir, I beg to lay:

Notification No. HD 41 TRM 78, dated 17th April, 1980.

The Karnataka Motor Vehicles (Third Amendment) Rules, 1980. Under Section 133 (3) of the Karnataka Motor Vehicles Act, 1939

MR. SPEAKER —Papers laid.

ಶ್ರೀ ಪಾರ್ವತಿ ರಾಮಸ್ವಾಮಿ.—ಸ್ವಾಮಿ, ನಾನು ಹಶ್ಯಕ್ಚುತಿಗೆ ಸಂಬಂಧಪಟ್ಟಂತೆ ಒಂದು ನೋಟೀಸು ಕೊಟ್ಟಿದ್ದೇನೆ ಈ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡಲು ಈಗಲೇ ಅನುಮತಿ ಕೊಡುವುದಾದರೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗಳು ಮೊದಲು ಮುಗಿಯಲಿ. ಅನಂತರ ತಮಗೆ ವಿಷಯ ಪ್ರಸ್ತಾಪ ಮಾಡಲು ಅವಕಾಶ ಕೊಡುತ್ತೇನೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ಬೆಂಗಳೂರು ನಗರದಲ್ಲಿ ರೇಷನ್ ಅಂಗಡಿಗಳ ಮುಖಾಂತರ ದುರ್ನಾತದ ಅಕ್ಕಿಯನ್ನು ಹಂಚುತ್ತಿದ್ದಾರೆ. ಈ ಬಗ್ಗೆ ನಾನು ಒಂದು ನೋಟೀಸ್ ಕೊಟ್ಟಿದ್ದೇನೆ. ನಗರದಲ್ಲಿ ೨೦ ಲಕ್ಷ ಜನರಿಗೆ ದನ ತಿನ್ನಕ್ಕಂಥ ಅಕ್ಕಿಯನ್ನು ಸರಬರಾಜು ಮಾಡುತ್ತಿದ್ದಾರೆ. ಇದು ಬಹಳ ಆಬ್ಜೆಂಟ್. ಇದನ್ನು ಇವತ್ತು ತೆಗೆದು ಕೊಳ್ಳಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಎಲ್ಲದಕ್ಕೂ ಅಜೆಂಡ್ಸ್ ಇದೆ. ಇಲ್ಲಿ ಮೂಲ್ಯ ಸದಸ್ಯರುಗಳು ಬಹಳ ಮಹತ್ವವಾದ ವಿಚಾರಗಳನ್ನು ಚರ್ಚೆಗೆ ತರುತ್ತಿದ್ದಾರೆ ಅದರಲ್ಲಿ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಬಗ್ಗೆ ಒಂದು ಸ್ಪಷ್ಟವಾದ ತೀರ್ಮಾನವಾಗಿದೆ. ಕೆಲವು ನೋಟೀಸ್‌ಗಳು ನಿನ್ನೆಯದಿಂದ ಬಾಕಿಯೇ ಉಳಿದಿದೆ. ಒಂದು ಮುಖ್ಯವಾದ ವಿಚಾರದ ಬಗ್ಗೆ ಮೂಲ್ಯ ರಾಮಸ್ವಾಮಿ ಬೆಂಬರು ನೋಟೀಸ್ ಕೊಟ್ಟಿದ್ದಾರೆ. ಅದನ್ನು ಈಗ ತೆಗೆದುಕೊಳ್ಳಬೇಕೆಂದು ಗುರಿ. ಆದ್ದರಿಂದ ಈ ವಿಚಾರದಲ್ಲಿ ತಾವು ನೋಟೀಸ್ ಕೊಟ್ಟಿರಿ ತಕ್ಕಂಥಾದ್ದನ್ನು ಈಗ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ತಾವು ಈ ವಿಚಾರವನ್ನು ಇಲ್ಲಿ ರೈಸ್ ಮಾಡುವುದಕ್ಕೆ ನಾನು ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಪಾರ್ವತಿ ರಾಮಸ್ವಾಮಿ.—ಸ್ವಾಮಿ, ಪ್ರಶ್ನೋತ್ತರ ಅವಧಿಯಲ್ಲಿ ಈ ಒಂದು ಸಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು ಎಂದು ನಿಯಮವಿದೆ ಆ ನಿಯಮಕ್ಕೆ ವಿರುದ್ಧವಾಗಿ ತಾವು ಹೋಗುತ್ತಿದ್ದೀರಿ.

MR. SPEAKER.—Sometimes we can modify those provisions. I will give you an opportunity.

ಶ್ರೀ ಟಿ.ಎ. ಚೆನ್ನಬಸಪ್ಪ.—ಸ್ವಾಮಿ, ನಾನು ೩೦ ನೇ ತಾರೀಖಿಗೆ ಒಂದು ನೋಟೀಸ್ ಕೊಟ್ಟು ಒಂದು ವಾರವಾಯಿತು ಇನ್ನೂ ನನಗೆ ಅವಕಾಶ ದೊರಕಲಿಲ್ಲ.

MR. SPEAKER.—So many notices are there. We can take them up during the next session.